# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1107

2) ಮಾನ್ಯ ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು)

3) ಉತ್ತರಿಸುವ ದಿನಾಂಕ : 12/03/2026

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯ ಯಾವಾಗ ಅಸ್ತಿತ್ವಕ್ಕೆ ಬಂದಿರುತ್ತದೆ ಇದರ ಮೂಲ ಉದ್ದೇಶಗಳು ಏನು; ಕಾರ್ಯ ಚಟುವಟಿಕೆಗಳ ಕ್ಷೇತ್ರ ಎಷ್ಟು; | ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯವನ್ನು 1968ರಲ್ಲಿ ಸ್ಥಾಪಿಸಲಾಗಿದ್ದು, ಘಟಕದ ಮೂಲ ಉದ್ದೇಶಗಳ ವಿವರ ಕೆಳಕಂಡಂತಿದೆ:-<br>1. ಅಪರಾಧ ಘಟಿಸಿದ ಸ್ಥಳದಲ್ಲಿ ದೊರಕಬಹುದಾದ ಸಮರ್ಪಕ ಭೌತಿಕ ಕುರುಹುಗಳನ್ನು ಗುರುತಿಸುವಲ್ಲಿ ತನಿಖಾಧಿಕಾರಿಗಳಿಗೆ ಸಹಕರಿಸುವುದು. ಹೀಗೆ ಗುರುತಿಸಲಾದ ಭೌತಿಕ ಕುರುಹು/ಸಾಕ್ಷ್ಯಗಳನ್ನು ಸೂಕ್ತ ರೀತಿಯಲ್ಲಿ ಸಂಗ್ರಹಿಸಿ ತನಿಖಾಧಿಕಾರಿಗಳಿಗೆ ನೀಡುವುದು.<br>2. ಅಪರಾಧ ಸ್ಥಳದಲ್ಲಿನ ಕುರುಹು/ಸಾಕ್ಷ್ಯಗಳ ಪ್ರಾಥಮಿಕ ವಿಶ್ಲೇಷಣೆ ಕೈಗೊಳ್ಳುವುದು.<br>3. ಅತ್ಯಾಧುನಿಕ ವಿಶ್ಲೇಷಣಾ ಕಾರ್ಯವಿಧಾನಗಳನ್ನು ಅನುಸರಿಸಿ ಭೌತಿಕ ಸಾಕ್ಷ್ಯಗಳನ್ನು ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸುವುದು.<br>4. ನ್ಯಾಯ ವಿಜ್ಞಾನ ಪರೀಕ್ಷೆಯಿಂದ ಬಂದಂತಹ ಫಲಿತಾಂಶಗಳನ್ನು ಅರ್ಥೈಸುವುದು ಮತ್ತು ವಿಶ್ಲೇಷಣಾ ವರದಿಯನ್ನು ತನಿಖಾಧಿಕಾರಿಗಳಿಗೆ ಸಲ್ಲಿಸುವುದು.<br>5. ನ್ಯಾಯಾಲಯಗಳಲ್ಲಿ ನ್ಯಾಯ ವಿಜ್ಞಾನ ವರದಿಗಳ ಬಗ್ಗೆ ಸಾಕ್ಷಿ ನುಡಿಯುವುದು. |
| ಆ) | ವಿಧಿ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯ ಎಷ್ಟು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದೆ; ಈ ವಿಭಾಗವು ಸಂಚಾರಿ ನ್ಯಾಯ ವಿಜ್ಞಾನ ಪ್ರಯೋಗಾಲಯಗಳನ್ನು ಹೊಂದಿದೆಯೇ; ಹೊಂದಿದ್ದಲ್ಲಿ ಅದರ ವಿವರಗಳನ್ನು ನೀಡುವುದು; | ರಾಜ್ಯದಲ್ಲಿ 01 ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ ಮತ್ತು 07 ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ.<br><br>ರಾಜ್ಯದಲ್ಲಿ ಒಟ್ಟು 17 ಸಂಚಾರಿ ಮೊಬೈಲ್ ಫೋರೆನ್ಸಿಕ್ ವಾಹನಗಳಿದ್ದು, ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯದ ಅಧೀನದಲ್ಲಿ-02 ಮತ್ತು 07 ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳಲ್ಲಿ ತಲಾ 01 ರಂತೆ ಒಟ್ಟು 07 ಹಾಗೂ ಬೆಂಗಳೂರು ನಗರ ಪೊಲೀಸ್ ಘಟಕ ವ್ಯಾಪ್ತಿಯಲ್ಲಿ 08 ಮೊಬೈಲ್ ಫೋರೆನ್ಸಿಕ್ ವಾಹನಗಳು ಕಾರ್ಯನಿರ್ವಹಿಸುತ್ತಿವೆ. |

<table>
<tr><td>ಇ)</td><td>ವಿಧಿ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯ ಎಷ್ಟು ವಿಭಾಗಗಳನ್ನು ಹೊಂದಿರುತ್ತದೆ; ವಿಭಾಗಗಳ ವಿವರಗಳನ್ನು ನೀಡುವುದು;</td><td>ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಒಟ್ಟು 13 ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು, ವಿವರ ಕೆಳಕಂಡಂತಿದೆ:-
<table>
<tr><th>ಕ್ರ ಸಂ</th><th>ವಿಭಾಗ</th></tr>
<tr><td>1.</td><td>ಡಿ.ಎನ್.ಎ</td></tr>
<tr><td>2.</td><td>ಜೀವಶಾಸ್ತ್ರ</td></tr>
<tr><td>3.</td><td>ರಸಾಯನಶಾಸ್ತ್ರ</td></tr>
<tr><td>4.</td><td>ವಿಷವಿಜ್ಞಾನ</td></tr>
<tr><td>5.</td><td>ನಾರ್ಕೋಟಿಕ್ಸ್</td></tr>
<tr><td>6.</td><td>ಅಗ್ನಿ ಅಸ್ತ್ರ</td></tr>
<tr><td>7.</td><td>ಭೌತಶಾಸ್ತ್ರ</td></tr>
<tr><td>8.</td><td>ಮನೋವಿಜ್ಞಾನ</td></tr>
<tr><td>9.</td><td>ಪ್ರಶ್ನಿತ ದಾಸ್ತಾವೇಜು</td></tr>
<tr><td>10.</td><td>ಮೊಬೈಲ್ ಫೋರೆನ್ಸಿಕ್</td></tr>
<tr><td>11.</td><td>ಆಡಿಯೋ ವೀಡಿಯೋ</td></tr>
<tr><td>12.</td><td>ಕಂಪ್ಯೂಟರ್ ಫೋರೆನ್ಸಿಕ್</td></tr>
<tr><td>13.</td><td>ಛಾಯಾಚಿತ್ರ</td></tr>
</table></td></tr>
<tr><td>ಈ)</td><td>ಕರ್ನಾಟಕ ವಿಧಿ ವಿಜ್ಞಾನ ಪ್ರಯೋಗಾಲಯಗಳ ನಿರ್ದೇಶನಾಲಯಕ್ಕೆ ಹಂಚಿಕೆಯಾದ ಸಿಬ್ಬಂದಿ ಎಷ್ಟು; ಹಂಚಿಕೆಯ ಸಿಬ್ಬಂದಿಯಲ್ಲಿ ಪ್ರಸ್ತುತ ಇರುವ ಸಿಬ್ಬಂದಿ ಹಾಗೂ ಖಾಲಿ ಇರುವ ಸಿಬ್ಬಂದಿ ಎಷ್ಟು ನಿಯೋಜನೆಯ ಮೇಲೆ ಇರುವ ಸಿಬ್ಬಂದಿ ಎಷ್ಟು ಖಾಲಿ ಇರುವ ಸಿಬ್ಬಂದಿಯನ್ನು ತುಂಬಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ;</td><td>ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಕ್ಕೆ ಹಂಚಿಕೆಯಾದ ತಾಂತ್ರಿಕ ಅಧಿಕಾರಿ/ಸಿಬ್ಬಂದಿ ಹಾಗೂ ಲಿಪಿಕ ಸಿಬ್ಬಂದಿಗಳ ಮಂಜೂರಾತಿ ಬಲ, ವಾಸ್ತವ ಬಲ ಮತ್ತು ರಿಕ್ತಸ್ಥಾನದ ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಖಾಲಿ ಇರುವ ಸಿಬ್ಬಂದಿಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮದ ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.</td></tr>
<tr><td>ಉ)</td><td>ಕರ್ನಾಟಕದ ವಿಧಿ ವಿಜ್ಞಾನ ಪ್ರಯೋಗಾಲಯ ಎನ್.ಎ.ಬಿ.ಎಲ್ ಮಾನ್ಯತೆಯನ್ನು ಹೊಂದಿದೆಯೇ; ಹೊಂದಿದ್ದಲ್ಲಿ, ಇದರಿಂದ ಯಾವ ಯಾವ ವಿಭಾಗದಲ್ಲಿ ಅವರು ಸಾಕ್ಷಿ ನೀಡಲು ಮತ್ತು ಪ್ರಯೋಗ ಮಾಡಲು ಅವಕಾಶವಿರುತ್ತದೆ; ಈ ಪ್ರಯೋಗಾಲಯ ಸೈಬರ್ ಪ್ರಯೋಗಾಲಯ ಹೊಂದಿರುತ್ತದೆಯೇ; ಹೊಂದಿದ್ದಲ್ಲಿ ಇದರ ಪ್ರಯೋಜನಗಳೇನು?</td><td>ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯವು ಎನ್.ಎ.ಬಿ.ಎಲ್ ISO/IEC 17025 ಮಾನ್ಯತೆಯನ್ನು ದಿನಾಂಕ: 02/12/2023ರಂದು ಪಡೆದಿದ್ದು, ಎಲ್ಲಾ 13 ವಿಭಾಗಗಳಿಗೆ ಸಾಕ್ಷಿ ನೀಡಲು ಮತ್ತು ಪ್ರಯೋಗ ಮಾಡಲು ಅವಕಾಶವಿರುತ್ತದೆ.<br><br>ರಾಜ್ಯದಲ್ಲಿ ದಾಖಲಾಗುವ ಸೈಬರ್ ಮತ್ತು ಸಾಮಾನ್ಯ ಪ್ರಕರಣಗಳಲ್ಲಿ ಸಂಗ್ರಹಿಸುತ್ತಿರುವ Digital Evidence ಗಳನ್ನು (ಸಿ.ಸಿ.ಟಿ.ವಿ ದೃಶ್ಯಗಳು, ಮೊಬೈಲ್, ಕಂಪ್ಯೂಟರ್, ಆಡಿಯೋ-ವೀಡಿಯೋ, ಸಿಡಿ/ಡಿವಿಡಿ ಮತ್ತು ಇನ್ನಿತರ) ಸೈಬರ್ ವಿಭಾಗದಲ್ಲಿ ವಿಶ್ಲೇಷಿಸಿ ವರದಿಯನ್ನು ಸಲ್ಲಿಸಲಾಗುತ್ತಿದೆ.</td></tr>
</table>

**ಸಂಖ್ಯೆ: ಹೆಚ್‌ಡಿ 39 ಪಿಒಪಿ 2026**

**(ಡಾ|| ಜಿ.ಪರಮೇಶ್ವರ)**
ಗೃಹಸಚಿವರು.

## ಅನುಬಂಧ-1

| ತಾಂತ್ರಿಕ ಅಧಿಕಾರಿ/ಸಿಬ್ಬಂದಿ | | | | |
|---|---|---|---|---|
| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾತಿ ಬಲ | ವಾಸ್ತವ ಬಲ | ರಿಕ್ತ ಸ್ಥಾನ |
| 1. | ನಿರ್ದೇಶಕರು | 1 | 1 | 0 |
| 2. | ಜಂಟಿ ನಿರ್ದೇಶಕರು | 3 | 1 | 2 |
| 3. | ಉಪ ನಿರ್ದೇಶಕರು | 16 | 8 | 8 |
| 4. | ಸಹಾಯಕ ನಿರ್ದೇಶಕರು | 56 | 45 | 11 |
| 5. | ಹಿರಿಯ ವೈಜ್ಞಾನಿಕ ಅಧಿಕಾರಿ | 98 | 85 | 13 |
| 6. | ವೈಜ್ಞಾನಿಕ ಅಧಿಕಾರಿ | 206 | 124 | 82 |
| 7. | ಸೋಕೋ | 206 | 201 | 5 |
| 8. | ಪ್ರಯೋಗಾಲಯ ಸಹಾಯಕ (ಛಾಯಚಿತ್ರ) | 1 | 1 | 0 |
| 9. | EEG ತಂತ್ರಜ್ಞ | 7 | 6 | 1 |
| 10. | ಪ್ರಯೋಗಾಲಯ ಅಟೆಂಡರ್ | 121 | 40 | 81 |
| | **ಒಟ್ಟು** | **715** | **512** | **203** |

| ಲಿಪಿಕ ಸಿಬ್ಬಂದಿ | | | | |
|---|---|---|---|---|
| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾತಿ ಬಲ | ವಾಸ್ತವ ಬಲ | ರಿಕ್ತ ಸ್ಥಾನ |
| 1. | ಆಡಳಿತಾಧಿಕಾರಿ | 1 | 1 | 0 |
| 2. | ಸಹಾಯಕ ಆಡಳಿತಾಧಿಕಾರಿ | 6 | 6 | 0 |
| 3. | ಶಾಖಾಧೀಕ್ಷಕರು | 8 | 8 | 0 |
| 4. | ಪ್ರಥಮ ದರ್ಜೆ ಸಹಾಯಕರು | 11 | 10 | 1 |
| 5. | ಶೀಘ್ರಲಿಪಿಗಾರರು | 4 | 3 | 1 |
| 6. | ದ್ವಿತೀಯ ದರ್ಜೆ ಸಹಾಯಕರು | 20 | 18 | 2 |
| 7. | ಬೆರಳಚ್ಚುಗಾರರು | 1 | 0 | 1 |
| 8. | ದಲಾಯತ್ | 22 | 15 | 7 |
| | **ಒಟ್ಟು** | **73** | **61** | **12** |

## ಅನುಬಂಧ-2

- ಜಂಟಿ ನಿರ್ದೇಶಕ ಹುದ್ದೆಗೆ ಅರ್ಹ 06 ವರ್ಷ ಸೇವೆ ಸಲ್ಲಿಸಿರುವ ಉಪ ನಿರ್ದೇಶಕ ವೃಂದದ ಅಧಿಕಾರಿಗಳು ಲಭ್ಯವಿರುವುದಿಲ್ಲ.
- ಉಪ ನಿರ್ದೇಶಕ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 6586/2022ರಲ್ಲಿ ಸಹಾಯಕ ನಿರ್ದೇಶಕ ವೃಂದದ ಜೇಷ್ಠತಾ ಪಟ್ಟಿಗೆ ತಡೆಯಾಜ್ಞೆ ಇರುತ್ತದೆ.
- ಸಹಾಯಕ ನಿರ್ದೇಶಕ ವೃಂದದಲ್ಲಿ 08 ಮುಂಬಡ್ತಿ ಹುದ್ದೆಗೆ ಅರ್ಹ ಅಧಿಕಾರಿಗಳು ಲಭ್ಯವಿರುವುದಿಲ್ಲ ಹಾಗೂ 03 ನೇರ ನೇಮಕಾತಿ ಹುದ್ದೆಗೆ ಅರ್ಹ ಅಭ್ಯರ್ಥಿಗಳು ಆಯ್ಕೆಯಾಗದ ಕಾರಣ ಸದರಿ ಹುದ್ದೆಗಳು ಭರ್ತಿಯಾಗಿರುವುದಿಲ್ಲ.
- ಖಾಲಿ ಇರುವ 82 ವೈಜ್ಞಾನಿಕ ಅಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.
- ರಾಜ್ಯ ಮತ್ತು ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಗಳಲ್ಲಿ ಖಾಲಿ ಇರುವ 81 ಪ್ರಯೋಗಾಲಯ ಸೇವಕರ ಹುದ್ದೆಗಳ ಎದುರಾಗಿ ಸರ್ಕಾರದ ಆದೇಶ ಸಂಖ್ಯೆ: ಒಇ/53/ಪೊಸಇ/2018, ದಿನಾಂಕ: 30/04/2020ರನ್ವಯ 30 ಪ್ರಯೋಗಾಲಯ ಸೇವಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.
- ಅಲ್ಲದೇ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/131/ಪಿಇಐ/2025, ದಿನಾಂಕ: 24/12./2025ರನ್ವಯ 15 ಪ್ರಯೋಗಾಲಯ ಸೇವಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಸಹಮತಿ ನೀಡಲಾಗಿದ್ದು, ಇನ್ನುಳಿದ ಖಾಲಿ ಇರುವ ಹುದ್ದೆಗಳಲ್ಲಿ ಲಿಪಿಕ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಹಂಚಿಕೆಯಾಗಿದ್ದು, ನೇಮಕಾತಿ ಆದೇಶ ಹೊರಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.